ಸ್ಲೀಪರ್ ಬಸ್ ಬೇಕೆಂದರೆ ರಾತ್ರಿಯವರೆಗೆ ಕಾಯಬೇಕು. ಅದೂ ಗ್ಯಾರಂಟಿಯಿಲ್ಲ ಎಂದು ಬಸ್ ಕಂಟ್ರೋಲರ್ ಹೇಳಿದ್ದಾರೆ. 'ರೀ ಯಜಮಾನ್ರೆ, ಸುಮ್ಮನ ಸಿಕ್ಕ ಗಾಡಿಗೆ ಹತ್ರಿ, ನಾಳೆ ಬೆಂಗಳೂರೊಳಗ ರ್‍ಯಾಲಿ ಐತೆಲ್ಲ, ಅದರ ಸಲುವಾಗಿ ಎಲ್ಲ ಬಸ್ಸು ಬುಕ್ ಆಗ್ಯಾವ. ಅದ ಅಷ್ಟss ಅಲ್ಲ, ನಾಳೆ ಅಲ್ಲಿ ಮಿಲಿಟರಿ ಭರ್ತಿ ಮಾಡಕೊಳ್ಳಾವರ್ರ ಅದಾರಂತ, ಹೆಗಲಿಗೆ ಚೀಲ ಹಾಕ್ಕೊಂಡ ಸಾವಿರಾರು ಹುಡುಗರು ಹೊಂಟಾರ, ನಿಮ್ಮ ಕಣ್ಣ ಮುಂದ ಅದಾರು... ಯಾಕ ಕಾಣವಲ್ಲರೇನು?' ಕಂಟ್ರೋಲರ್ ತನಗೆ ತಿಳಿಸಿದಂತೆಯೂ ವ್ಯಂಗ್ಯ ಮಾಡಿದಂತೆಯೂ ಮಾಡಿದ. ಯುದ್ಧದಂತಹ ಸಾವು ಬದುಕಿನ ಪರಿಸ್ಥಿತಿಗಳಲ್ಲಿ ಮನೆಯ ಸ್ಥಿತಿಯನ್ನು ಮರೆತು ಕರ್ತವ್ಯ ಮಾಡುವ ಸೈನಿಕರಂತೆ ತಾನು ಕೂಡ ನಿರುಮ್ಮಳನಾಗಿರಬೇಕು. ಪಾಪ, ಬಸ್ ನಿಯಂತ್ರಕ ಎಷ್ಟು ಒಳ್ಳೆಯವನಿದ್ದಾನೆ. ಬಸ್‌ಗಳನ್ನು ಮತ್ತು ಜನರನ್ನು ಸಮಾಧಾನ ಪಡಿಸಲು ಪ್ರಯತ್ನಿಸುತ್ತಿದ್ದಾನೆ. ಇವನು ಅವನ ಹತ್ತಿರ ಹೋಗಿ ಪರಿಚಯ ಮಾಡಿಕೊಂಡ. 'ಸರ್, ನಿಮ್ಮ ಕೆಲಸ ನೋಡಿ ನನಗ ಬಾಳ ಖುಷಿ ಆತು. ಬರ್‍ರಿ ಸರ್, ಇಲ್ಲೆ ಬಸ್‌ಸ್ಟ್ಯಾಂಡ್ ಕ್ಯಾಂಟೀನೊಳಗ ಅರ್ಧ ಕಪ್ ಚಾ ಕುಡಿಯೋಣೇನು?' ನಾಗರಾಜನ ಮಾತಿನಿಂದ ಬಸ್ ಕಂಟ್ರೋಲರ್‌ಗೆ ಸಂತೋಷವಾದಂತೆ ಅನಿಸಿದರೂ ಚಹಾ ಕುಡಿಯಲಿಕ್ಕೆ ಕರೆದದ್ದು ಕೇಳಿ ಕಸಿವಿಸಿಗೊಂಡ. 'ಬೆಂಗಳೂರಿಗೆ ಟಿಕೆಟ್ ರಿಜರ್ವ್ ಮಾಡಲಿಕ್ಕೆ ಸಾಧ್ಯ ಇಲ್ರಿ... ಎಲ್ಲಾ ಸೀಟು ಬುಕ್ ಆಗ್ಯಾವ. ಎಷ್ಟ ಸಲ ಹೇಳಬೇಕು ನಿಮಗ? ಒಂದ ಸಲ ಹೇಳಿದರ ತಿಳಿಯಂಗಿಲ್ಲೇನು? ನಿಮ್ಮ ಅರ್ಧ ಕಪ್ ಚಾ ಸಲುವಾಗಿ ನಾ ನೌಕರಿ ಕಳಕೊಳ್ಳಲೇನು? ದೂರ ನಡ್ರಿ ಅತ್ಲಾಗ... ನಾನೂ ನೋಡಾಕ ಹತ್ತೇನಿ... ಮುಂಜಾನೆಯಿಂದ ಬರೇ ಇಲ್ಲೆ ಸುತ್ತಲಿಕ್ಕೆ ಹತ್ತೀರಿ...' ಕಂಟ್ರೋಲರ್ ಕಡ್ಡಿ ಮುರಿದಂತೆ ಹೇಳಿದ. ನೌಕರಿಯಲ್ಲಿ ಆತ ಒಂದು ದಿನವೂ ಹೀಗೆ ಯಾರಿಂದಲೂ ಅನಿಸಿಕೊಂಡವನಲ್ಲ.

ಯಾರಾದರೂ ಸಿಕ್ಕಿದ್ದರೆ ತನ್ನ ದುಃಖ ಹೇಳಿಕೊಳ್ಳಬಹುದಿತ್ತು. ಒಂದು ತಾಸು ದಾಟಿ ಹೋಯಿತು. ಎರಡು ತಾಸು ದಾಟಿ ಹೋಯಿತು. ಹುಬ್ಬಳ್ಳಿಯ ಮಹಾಂತಪ್ಪನಿಗೆ ಫೋನ್ ಮಾಡಬೇಕೆಂದುಕೊಂಡ. ಅವನಿಗೆ ರಾಜಕೀಯ ಪ್ರಭಾವವಿದೆ. ಅವನನ್ನು ಕರೆದುಕೊಂಡು ಹೋದರೆ ಶಂಕರಪ್ಪಮಾವನನ್ನು ಬಗ್ಗಿಸಬಹುದು. ಇಂತಹ ಸಂಗತಿಗಳನ್ನು ಗೆಳೆಯರ ಮುಂದೆ ಹೇಳುವುದು ಕೂಡ ಕಷ್ಟ. ಏನೋ ಮಾಡಲು ಹೋಗಿ ಏನೋ ಮಾಡಿದಂತಾಗುತ್ತದೆ. ಸಣ್ಣ ವಿಷಯವನ್ನು ಸುಮ್ಮಸುಮ್ಮನೆ ತಾನು ದೊಡ್ಡದು ಮಾಡುತ್ತಿದ್ದೇನೆ. ಆತ ಸುಮ್ಮನಾದ. ಯಾರ ಮುಂದೆ ಹೇಳಿ ಏನು ಪ್ರಯೋಜನ? ಮತ್ತೊಂದು ಸಲ ಬಂದಾಗ ನೋಡಿದರಾಯಿತು. ಬೆಂಗಳೂರಿಗೆ ಹೋಗಬೇಕೋ ಅಥವಾ ಯಾವುದಾದರೂ ಗೆಳೆಯನ ಊರಿಗೆ ಹೋಗಬೇಕೋ? ಉಯ್ಯಾಲೆ ನಿರಂತರ ತೂಗುತ್ತಲೆ ಇದೆ. ಎಷ್ಟೊಂದು ಜನ ಬೆಂಗಳೂರಿಗೆ ಹೊರಟಿದ್ದಾರೆ. ಹತ್ತರಲ್ಲಿ ತಾನು ಹನ್ನೊಂದನೆಯವನು. ಬೆಂಗಳೂರಿಗೆ ಹೋಗದೆ ಮತ್ತೆಲ್ಲಿ ಹೋಗಲಾಗುತ್ತದೆ? ತನಗೆ ಬೇರೆ ಜಾಗವೆಲ್ಲಿದೆ? ಇಷ್ಟು ವರ್ಷ ಅದು ತನಗೆ ಅನ್ನ ಹಾಕಿಲ್ಲವೆ? ತಾನು ಯಾರು, ಯಾರ ಮನೆಯವನು, ಯಾವ ಜಾತಿಯವನು ಎಂದು ಅದು ಕೇಳಿಲ್ಲ. ಹಾಗೆ ನೋಡಿದರೆ ತನ್ನೂರಿಗಿಂತ ಬೆಂಗಳೂರೇ ಉತ್ತಮ ಅಲ್ಲವೆ? ಹೊಯ್ದಾಟದ ದೊಡ್ಡ ದೊಡ್ಡ ಅಲೆಗಳಿಗೆ ಹೃದಯದ ದಂಡೆ ಘಾಸಿಗೊಳ್ಳುತ್ತಿತ್ತು. ಮನಸ್ಸನ್ನು ನಿರಾಳಗೊಳಿಸಲು ಆತ ಹೋಟೆಲಿಗೆ ನಡೆದ.

ಅವನು ಹೇಳದಿದ್ದರೂ ಅವನ ಕಾಲುಗಳು ಆತ ಯಾವಾಗಲೂ ಚಹಾ ಕುಡಿಯುತ್ತಿದ್ದ ಬಸ್‌ಸ್ಟ್ಯಾಂಡ್ ಎದುರಿಗಿರುವ ಹೋಟೆಲಿಗೆ ಅವನನ್ನು ಕರೆದುಕೊಂಡು ಬಂದವು. ಅಷ್ಟು